ಅ) ಹತ್ತಿಕೊಳ್ಳ ಲೆವಲ್ ಕ್ರಾಸನ್ನು ಬಂದ್ ಮಾಡಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಧಾರವಾಡ ಮಹಾನಗರದ ಹತ್ತಿಕೊಳ್ಳ ಓವರ್ ಬ್ರಿಡ್ಜ್ ನಿರ್ಮಾಣದ ಬಗ್ಗೆ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯವರು ಈ ವರೆಗೆ ಕೈಗೊಂಡಿರುವ ಕ್ರಮಗಳೇನು;

ಇ) ಹತ್ತಿಕೊಳ್ಳ ಓವರ್ ಬ್ರಿಡ್ಜ ನಿರ್ಮಾಣವನ್ನು ರೈಲ್ವೆ ಇಲಾಖೆಯ ವತಿಯಿಂದ ಮಾಡಿಸಲು ಸರ್ಕಾರದವರು ಏನಾದರೂ ಕ್ರಮ ಕೈಗೊಂಡಿದ್ದಾರೆಯೇ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್ - ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಬಂದಿದೆ.

ಆ) ಮಹಾನಗರಸಭೆ ಅಧಿಕಾರಿಗಳು, ರೇಲ್ವೆ ಅಧಿಕಾರಿಗಳು, ಸ್ಥಳೀಯ ಶಾಸಕರು ಹಾಗೂ ಪ್ರಮುಖ ನಾಗರೀಕರೊಂದಿಗೆ ಜಂಟಿಯಾಗಿ ಸ್ಥಳ ನಿರೀಕ್ಷಣೆ ಮಾಡಿ ಹತ್ತಿಕೊಳ್ಳದ ಹಿಂದೆ ಲೆವಲ್ ಕ್ರಾಸಿಂಗ್ ಇದ್ದ ಸ್ಥಳದಲ್ಲಿ ಓವರ್ ಬ್ರಿಡ್ಜ್ ನಿರ್ಮಿಸುವ ಬಗ್ಗೆ ಕೂಡಲೇ ತೀರ್ಮಾನಿಸಿ ಅಂದಾಜು ಪತ್ರಿಕೆ ತಯಾರಿಸುವ ಕ್ರಮ ಕೈಗೊಳ್ಳಲು ರೇಲ್ವೆ ಇಲಾಖೆಯವರಿಗೆ ತಿಳಿಸಲಾಗಿದೆ.

ಇ) ಈಗಾಗಲೇ ಹತ್ತಿಕೊಳ್ಳ ಓವರ್ ಬ್ರಿಡ್ಜ್‌ನ ಸಲುವಾಗಿ ರೇಲ್ವೆ ಇಲಾಖೆಯವರು ಸರ್ವೆ ಕಾರ್ಯ ಮಾಡಿದ್ದು ಈ ನಕ್ಷೆಗಳನ್ನು ತಯಾರಿಸಲಾಗುತ್ತಿದೆ. ನಕ್ಷೆ ಹಾಗೂ ಅಂದಾಜು ಪತ್ರಿಕೆಗಳನ್ನು ತಯಾರಿಸಿ ಯೋಜನೆಯನ್ನು ಕಾರ್ಯಗತಗೊಳಿಸಲು ರೇಲ್ವೆ ಇಲಾಖೆಗೆ ಕೇಳಿಕೊಳ್ಳಲಾಗಿದೆ.

ವಿಷಯ :- ಧಾರವಾಡ-ಹುಬ್ಬಳ್ಳಿ ಮಹಾನಗರದಲ್ಲಿ ಅನಧಿಕೃತ ನಿವೇಶನಗಳು.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2349 (379)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ-ಹುಬ್ಬಳ್ಳಿ ಮಹಾನಗರದಲ್ಲಿ ಅನಧಿಕೃತ ನಿವೇಶನಗಳಲ್ಲಿ ಕಟ್ಟಡಗಳು ಬಂದಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸದರಿ ಮಹಾನಗರದಲ್ಲಿ ಬಂದಿರುವ ಅನಧಿಕೃತ ಬಡಾವಣೆಗಳು ವಿವರಣೆ ಕೊಡಿರಿ

ಇ) ಇನ್ನು ಮುಂದೆ ಇಂಥ ಅನಧಿಕೃತ ನಿವೇಶನಗಳು ಬರದಂತೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುವುದು?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಗಮನಕ್ಕೆ ಬಂದಿದೆ

ಆ) ಅನಧಿಕೃತ ಬಡಾವಣೆ ಯಾವುದೂ ಇರುವುದಿಲ್ಲ.

ಇ) ಅನಧಿಕೃತ ನಿವೇಶನಗಳು ಬಾರದಂತೆ ಈ ಕೆಳಗೆ ವಿವರಿಸಿದ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

1. ಸ್ಥಳೀಯ ಪತ್ರಿಕೆಗಳ ಮೂಲಕ ಇಂಥ ನಿವೇಶನ ತಯಾರಿಕೆಗೆ ವಿರುದ್ಧ ಎಚ್ಚರಿಕೆ ನೋಟೀಸುಗಳನ್ನು ಕೊಡಲಾಗಿದೆ.

2. ಇಂಥ ಅನಧಿಕೃತ ನಿವೇಶನಗಳನ್ನು ಹೊಂದುರ ನಿವೇಶನದಾರರಿಗೆ ಮುಂದಾಗ ಬಹುದಾದ ಸಮಸ್ಯೆಗಳ ಕುರಿತು ತುರ್ತು ಮಾಹಿತಿ ನೀಡಿ ಎಚ್ಚರಿಕೆ ನೀಡಲಾಗಿದೆ.

3. ಅನಧಿಕೃತ ನಿವೇಶನ : ಬಡಾವಣೆಗಳಿಗೆ ಯಾವುದೇ ಪ್ರತ್ಯೇಕ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗುತ್ತಿಲ್ಲ.

4. ಹಲವು ಸರ್ಕಾರಿ ಹಾಗೂ ಮಹಾನಗರಸಭೆಯ ಒಡೆತನದ ಜಮೀನುಗಳಲ್ಲಿ ಬಂದ ಅನಧಿಕೃತ ಕಟ್ಟಡಗಳನ್ನು ನೆಲಸಮ ಮಾಡಲಾಗಿದೆ.

ವಿಷಯ :- ರಾಜ್ಯದಲ್ಲಿಯ ಮಹಾನಗರ ಸಭೆಗಳ ವಾರ್ಷಿಕ ಆದಾಯ.

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2350 (379)

ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ) :- ಮಾನ್ಯ ನಗರಾಭಿವೃದ್ಧಿ, ಕಾಡಾ ಮತ ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯ ವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿಯ ಮಹಾನಗರ ಸಭೆಗಳ ಸಂಖ್ಯೆ ಎಷ್ಟು? ಅವುಗ ವಿವಿಧ ಮೂಲಗಳಿಂದ ಬರುವ ವಾರ್ಷಿಕ ಆದಾಯ ಮತ್ತು ಖರ್ಚಿನ ವಿವರಗಳನ್ನು ನೀಡುವುದ

ಆ) ಮಹಾನಗರ ಸಭೆಗಳಲ್ಲಿ ಕುಡಿಯುವ ನೀರಿನ ಸರಬರಾಜು ವ್ಯವಸ್ಥೆಗಳು ಸಮಪೆ ವಾಗಿದೆಯೇ ಹೇಗೆ, ನೀರಿನ ಪೂರೈಕೆಯು ಮಹಾನಗರಸಭೆ ನೋಡಿಕೊಳ್ಳುವುದೇ ಹೇ ಇದ್ದಲ್ಲಿ ಅವುಗಳ ನೀರು ವಿತರಣೆಯ ವ್ಯವಸ್ಥೆ ಹೇಗೆ ಇದೆ ಎಂಬುದನ್ನು ತಿಳಿಸಿರಿ.

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ, ಕಾಡಾ ಮತ್ತು ಹೈದ್ರಾಬಾದ್-ಕರ್ನಾ ಅಭಿವೃದ್ಧಿ ಮಂಡಳಿ ಸಚಿವರು) :-

ಅ) ಸಂಖ್ಯೆ 7

ಮಹಾನಗರ ಸಭೆಗಳ ವಾರ್ಷಿಕ ಆದಾಯ ಮತ್ತು ವೆಚ್ಚ ಈ ಕೆಳಕಂಡಂತಿರುತ್ತ